## 1

# ದೇವರ ಉದ್ದೇಶದ ಜನಾಂಗ

*"ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾವಿಧವಾದ ಜ್ಞಾನವು ಪರಲೋಕ ದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗ ಬೇಕೆಂಬುದನ್ನು ಉದ್ದೇಶಿಸಿದ್ದನು" (ಎಫೆಸ 3:10, 11).*

ಬಹಳ ಸಲ ಪರಿಶುದ್ಧ ಬರಹಗಳಲ್ಲಿ ಅಲ್ಪ ವ್ಯಕ್ತಪಡಿಸುವಿಕೆಯು ಶಕ್ತಿಯುತವಾದ ಅರ್ಥವನ್ನು ಕೊಡುತ್ತದೆ. ಉದಾಹರಣೆಗಾಗಿ, "ಇದು ದೇವರ ಕೃಪಾತಿಶಯವೇ" (ಎಫೆಸ 1:7) ಎಂಬ (ಇಂಗ್ಲೀಷ್‌ನಲ್ಲಿ ಏಳು ಪದಗಳು) ಪದಗಳಿಗೆ ಸತ್ಯವಾಗಿದೆ. ಈ ಪದಗುಚ್ಛವು ಪೌಲನು ಬರೆಯುತ್ತಿದ್ದ ಕ್ಷಮಾಪಣೆಯನ್ನು ಅರ್ಹವಾಗಿ ಮಾಡುತ್ತದೆ. ದೇವರು ಕೃಪೆಯಲ್ಲಿ ಬಡವನಾಗಿದ್ದರೆ, ನಮ್ಮ ಪಾಪಗಳನ್ನು "ಕಳುಹಿಸಿ ಬಿಡುವ" ವಿಷಯದಲ್ಲಿ ಆತನಿಂದ ನಾವು ಹೆಚ್ಚಾದದ್ದನ್ನು ನಿರೀಕ್ಷಿಸಲು ನಾವು ಶಕ್ತರಾಗುತ್ತಿರಲಿಲ್ಲ. ಹೀಗಿದ್ದರೂ, ಪೌಲನು ಒಪ್ಪಿಕೊಳ್ಳುವಂತೆ, ಆತನು ಕೃಪೆಯಲ್ಲಿ ಐಶ್ವರ್ಯವಂತನಾಗಿದ್ದರೆ, ನಮ್ಮ ಎಲ್ಲಾ ಅಪರಾಧಗಳನ್ನು ಮುಚ್ಚುವದಕ್ಕಿಂತ ಹೆಚ್ಚಾದ, ಅಪಾರವಾದ ಕ್ಷಮಾಪಣೆಯನ್ನು ನಾವು ನಿರೀಕ್ಷಿಸಬಹುದು. ಒಬ್ಬ ಬಡ ಮನುಷ್ಯನು ತನ್ನ "ಸ್ವಾಸ್ತ್ಯಗಳೊಳಗಿಂದ" ಇಲ್ಲವೇ "ಅದಕ್ಕನುಸಾರವಾಗಿ" ನಮಗೆ ಒಂದು ಕಾಣಿಕೆಯನ್ನು ಕೊಟ್ಟರೆ, ನಾವು ಒಂದು ಅಲ್ಪವಾದ ಬಹುಮಾನವನ್ನು ಸ್ವೀಕರಿಸುತ್ತೇವೆ, ಯಾಕಂದರೆ ಒಬ್ಬ ಬಡ ಮನುಷ್ಯ ಕೊಡುವುದಕ್ಕಾಗಿ ಅಲ್ಪವಾದದ್ದು ಇರುತ್ತದೆ. ಹೀಗಿದ್ದರೂ, ಒಬ್ಬ ಐಶ್ವರ್ಯವಂತನು ತನ್ನ "ಐಶ್ವರ್ಯಗಳೊಳಗಿಂದ" ಇಲ್ಲವೇ "ಅದಕ್ಕನುಸಾರವಾಗಿ" ನಮಗೆ ಒಂದು ಕಾಣಿಕೆ ಕೊಟ್ಟರೆ ನಾವು ಒಂದು ದೊಡ್ಡ ಹಾಗೂ ಧಾರಾಳವಾದ ಮೊತ್ತವನ್ನು ಪಡೆದುಕೊಳ್ಳುವೆವು, ಅದು ಅವನು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಕೊಟ್ಟ ಒಂದು ಕಾಣಿಕೆಯಾಗಿರುವುದು. ದೇವರ ಕ್ಷಮಾಪಣೆಯು "ಆತನ ಕೃಪೆಯ ಐಶ್ವರ್ಯಗಳಿಗೆ ಅನುಗುಣವಾಗಿ" ಇರುವುದೆಂದು ಪೌಲನು ಪ್ರಕಟಿಸಿದಾಗ ಇದು ಅವನ ಒತ್ತಡವಾಗಿತ್ತು. ದೇವರು ಕೃಪೆಯಲ್ಲಿ ಐಶ್ವರ್ಯವಂತನಾಗಿದ್ದು, ನಂಬುವವರ ಕಡೆಗೆ ತನ್ನ ಕ್ಷಮಾಪಣೆಯಲ್ಲಿ ಧಾರಾಳವಾದವನೂ ಅಳತೆಮೀರಿದವನೂ ಆಗಿರುವನೆಂಬುದನ್ನು ಆತನ ಮಾತುಗಳು ನಮಗೆ ಭರವಸೆ ಕೊಡುತ್ತವೆ.

ಈ ಚಿಕ್ಕ ವಾಕ್ಯವು ಇಲ್ಲವೇ ಬೈಬಲಿನಲ್ಲಿಯ ಒಂದು ವಾಕ್ಯದ ಭಾಗವು ಪ್ರಚಂಡ ವಾದ ಅರ್ಥವನ್ನು ಕೊಡುತ್ತವೆ ಎಂಬ ಈ ಜ್ಞಾಪಿಸುವಿಕೆಯು ಈ ಸತ್ಯವನ್ನು ನಮ್ಮ ಮುಂದೆ ತರುತ್ತದೆ: ಎಫೆಸ 3:11ರಲ್ಲಿಯ "ನಿತ್ಯವಾದ ಉದ್ದೇಶ" ಎಂಬ ಪದಗಳು, ನಾವು ಸಭೆಯ ಬಗ್ಗೆ ಯೋಚಿಸುವಾಗ ನಮ್ಮ ಯೋಚನೆಯಿಂದ ತಪ್ಪಿಸಿಕೊಂಡು ಹೋಗಲು ಬಿಡಬಾರದು. ಪೌಲನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ದೇವರ ಉದ್ದೇಶಕ್ಕೆ ಮುಖ್ಯ ಸ್ಥಾನವಿರವುದು:

> ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿ ಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು *ಉದ್ದೇಶಿಸಿದ್ದನು.* ದೇವರ ಸಾನ್ನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು (ಎಫೆಸ 3:10-12; ಒತ್ತಿ ಹೇಳಿದ್ದು ನನ್ನದು).

ಎಲ್ಲವನ್ನೂ ಒಳಗೊಂಡಿರುವ ದೇವರ ಯೋಜನೆಗೆ ಸಂಬಂಧಿಸಿದ ಯಾವುದೇ ವಿಚಾರವು ನಿಶ್ಚಯವಾಗಿಯೂ ಜಾಗರೂಕವಾದ ಮತ್ತು ವಿಚಾರಪೂರಿತ ಪರೀಕ್ಷೆಗೆ ಕರೆಯುವದು. ಹೊಸ ಒಡಂಬಡಿಕೆಯಲ್ಲಿಯ ಮೂರು ಪದಗಳು ಇವುಗಳಿಗಿಂತ ಹೆಚ್ಚು ಮಹತ್ವದೊಂದಿಗೆ ಬಹುಶಃ ಭಯಪಡಿಸುವದಿಲ್ಲ.

ಪೌಲನು ಹೇಳಿದಂತೆ, ಸಭೆಯು ದೇವರ ನಿತ್ಯ ಉದ್ದೇಶದ ನೆರವೇರಿಕೆಯಾಗಿದ್ದರೆ, ಆಗ ಸಭೆಯ ಮಹತ್ವವು ಅತಿಯಾಗಿ ಒತ್ತಿಹೇಳಲ್ಪಡಲಾರದು, ಪೌಲನು ಸಭೆಯನ್ನು ದೇವರ ನಿತ್ಯವಾದ ಉದ್ದೇಶವನ್ನು ನೆರವೇರಿಸಿದ ಸಾಧನದಂತೆ ವಿವರಿಸಿದಾಗ, ಕೂಡಲೇ ಮರೆಯಲ್ಪಡಲಾರದ ಹಾಗೂ ಸಮಾಂತರತೆಯಿಲ್ಲದ ಸಭೆಯ ಸ್ವಭಾವದ ನೋಟವನ್ನು ಕೊಟ್ಟನು.

ಈ ಪದಗುಚ್ಛವನ್ನು ಪ್ರಾರ್ಥನಾಪೂರ್ವಕವಾಗಿಯೂ ವಿಭಜನಾತ್ಮಕವಾಗಿಯೂ ಯೋಚಿಸಿರಿ. ದೇವರ ನಿತ್ಯ ಉದ್ದೇಶದ ನೆರವೇರುವಿಕೆಯಂತೆ ಸಭೆಯನ್ನು ಗುರುತಿಸುವುದು ನಮಗೆ ಸಭೆಯ ಸ್ವಭಾವದ ಬಗ್ಗೆ ಏನನ್ನು ಹೇಳುತ್ತದೆ?

## ಅದು ನಕ್ಷೆಯನ್ನು ಘೋಷಿಸುತ್ತದೆ

"ನಿತ್ಯವಾದ ಉದ್ದೇಶ" ಎಂಬ ಪದಗುಚ್ಛವು ಒಂದು ದೈವಿಕ ನಕ್ಷೆಯನ್ನು, ಸಭೆಗಾಗಿರುವ ಪರಿಶುದ್ಧ ಉದ್ದೇಶವನ್ನು ಅನ್ವಯಿಸುತ್ತದೆ. "ಸಭೆಯ ಉದ್ದೇಶವು ಏನಾಗಿರುವುದು?" ಎಂಬ ಪ್ರಶ್ನೆಗೆ, ದೇವರ ದೈವಿಕ ಉದ್ದೇಶದ ಕಾರ್ಯಾಚರಣೆಯಾಗಿದೆ ಎಂದು ನಾವು ಉತ್ತರ ಕೊಡತಕ್ಕದ್ದು.

ಪಾಪಭರಿತ ಮಾನವ ಕುಲದ ವಿಮೋಚನೆಗಾಗಿ ಯೇಸುವಿನ ಮರಣವು ಮೊದಲೇ ತಿಳಿಯಲ್ಪಟ್ಟಿತ್ತು, ಮೊದಲೇ ನೇಮಿಸಲ್ಪಟ್ಟಿತ್ತು ಹಾಗೂ ಜಗದುತ್ಪತ್ತಿಗಿಂದ ಮೊದಲೇ ಯೋಜಿಸಲ್ಪಟ್ಟಿತ್ತು. "... ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ. ಆತನು ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟನು ..." (1 ಪೇತ್ರ 1:18-20). ದೇವರು ಆಯ್ದುಕೊಂಡ ಸಮಯದಲ್ಲಿ ಯೇಸುವು ನಮ್ಮನ್ನು ದೇವರ ಮಕ್ಕಳನ್ನಾಗಿ ಮಾಡಲು ತನ್ನ ದೇಹವನ್ನೂ ರಕ್ತವನ್ನೂ ಅರ್ಪಿಸಿದನು: "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸ ಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮ ಶಾಸ್ತ್ರಾಧೀನನಾಗಿಯೂ ಬಂದನು" (ಗಲಾತ್ಯ 4:4, 5). ಮಕ್ಕಳೆಂದು ಈ ಸ್ವೀಕಾರವು ನಾವು ಕ್ರಿಸ್ತನ ದೇಹವಾದ ಸಭೆಯಾಗುವಾಗ ಸಂಭವಿಸುತ್ತದೆ. "ಹೇಗಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ

ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗಿಂತ ಮುಂಚೆ *ಕ್ರಿಸ್ತನಲ್ಲಿ* ಆರಿಸಿಕೊಂಡನು, ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು" (ಎಫೆಸ 1:4, 5; ಒತ್ತಿ ಹೇಳಿದ್ದು ನನ್ನದು). ಕ್ರಿಸ್ತನೊಳಗೆ ಬರುವವರನ್ನು ಮತ್ತು ಈ ದೇಹದಲ್ಲಿ ನಂಬಿಕೆಯಿಂದ ನೆಲೆಗೊಳ್ಳುವವರನ್ನು ತನ್ನ ಮಕ್ಕಳಾಗಿ ದತ್ತು ಸ್ವೀಕರಿಸಿಕೊಂಡು ಅವರನ್ನು ನಿತ್ಯವಾಗಿ ರಕ್ಷಿಸುವೆನೆಂದು ಸಮಯವನ್ನು ಆತನು ಸೃಷ್ಟಿಸುವ ಮೊದಲೇ ದೇವರು ಆಯ್ದುಕೊಂಡನು ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. ಸಭೆಯು ಈ ರೀತಿಯಲ್ಲಿ ದೃಷ್ಟಿಸಲ್ಪಡುವಾಗ, ಅದು ದೇವರ ಯೋಜನೆಯಂತೆ, ಜಗತ್ತಿಗಾಗಿ ಆತನ ಕೃಪೆಯುಳ್ಳ ನಕ್ಷೆಯಂತೆ ಮಾತ್ರವೇ ಅರ್ಥಮಾಡಿ ಕೊಳ್ಳಲ್ಪಡಬಹುದು.

ಆರ್. ಸಿ. ಬೆಲ್ ಎಂಬ ಪ್ರಸಿದ್ಧ ಬೈಬಲ್ ಬೋಧಕನು ತನ್ನ *ಸ್ಟಡೀಸ್ ಇನ್ ಎಫೆಸಿಯನ್ಸ್‌ದಲ್ಲಿ* ಹೀಗೆ ಬರೆದನು, "ಕೃಪೆಯಿಂದ ರಕ್ಷಣೆಯ ಸ್ವಭಾವವನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳುವವನಿಗೆ ಸಭೆಯ ಅಗತ್ಯತೆಯನ್ನು ಕಡೆಗಣಿಸುವುದು ಕಠಿಣವಾದದ್ದಾಗಿಯೇ ಇರುತ್ತದೆ"[1] ಸಭೆಯು ಪರಿಶುದ್ಧ ಬರಹಗಳಲ್ಲಿ ದೇವರ ರಕ್ಷಣೆಯ ಯೋಜನೆಯ ಮೊದಲು ಇಲ್ಲವೇ ಅನಂತರ ಸಂಘಟನೆಯಂತೆ ಪ್ರಸ್ತುತಪಡಿಸಲ್ಪಟ್ಟಿರುವದಿಲ್ಲ; ಅದು ದೇವರ ರಕ್ಷಣೆಯ ನಿಜವಾದ ಯೋಜನೆಯಾಗಿರುವುದೆಂದು ತೋರಿಸಲ್ಪಟ್ಟಿದೆ ಯಾಕಂದರೆ ಕ್ರಿಸ್ತನ ದೇಹದಲ್ಲಿ - ಯೇಸುವಿನ ರಕ್ತದ ಮುಖಾಂತರ - ದೇವರ ಮುಂದೆ ಆತನ ವಿಮೋಚಿತ ಮಕ್ಕಳಂತೆ ನಿಂತುಕೊಳ್ಳುತ್ತೇವೆ. ನಾವು ಆತನ ಮಕ್ಕಳಾಗಿದ್ದರೆ, ನಾವು ಆತನ ಸಭೆಯಾಗಿರುತ್ತೇವೆ. ಆತನ ಸಭೆಯಾಗಿರದೆ, ನಾವು ಆತನ ಮಕ್ಕಳಾಗಲಾರೆವು, ಮತ್ತು ಆತನ ಮಕ್ಕಳಾಗಿರದೇ ಆತನ ಸಭೆಯಾಗಲಾರೆವು. ಸಭೆಯು ದೇವರ ನಿತ್ಯ ಉದ್ದೇಶಕ್ಕೆ ಅಂಟಿಸಲ್ಪಟ್ಟಿರುವದಲ್ಲ; ಅದು ದೇವರ ನಿತ್ಯ ಉದ್ದೇಶವಾಗಿರುತ್ತದೆ.

ನೀವು ನಿಮ್ಮ ಒಬ್ಬ ಸ್ನೇಹಿತನನ್ನು ಸಂದರ್ಶಿಸುತ್ತಿರುವಿರಿ ಮತ್ತು ಅವನು ತನಗೆ ಪ್ರಿಯವಾಗಿದ್ದ ತನ್ನ ಫಾರ್ಮಿನಲ್ಲಿ ನಿಮ್ಮನ್ನು ನಡೆದಾಡಲು ಕರೆದುಕೊಂಡು ಹೋಗುವನೆಂದು ಕಲ್ಪಿಸಿಕೊಳ್ಳಿರಿ. ಹಸಿರು ಹುಲ್ಲುಗಾವಲಿನ ಮೇಲೆ ನೀವು ನಡೆಯುತ್ತಿರುವಾಗ, ಅವನು ಸ್ವಂತ ಫಾರ್ಮನ್ನು ಕೊಂಡುಕೊಳ್ಳುವ ಕನಸನ್ನು ಬಾಲ್ಯ ಪ್ರಾಯದಿಂದಲೇ ಹೊಂದಿಕೊಂಡಿದ್ದನೆಂದು ನಿಮಗೆ ಹೇಳುವನು. ಈ ಕನಸನ್ನು ನನಸಾಗಿಸಲು ಕೆಲವು ವರ್ಷಗಳಿಂದ ಪ್ರಾರಂಭಿಸಿದನು, ಈ ಹೊಲವನ್ನು ಅವನು ಕೊಂಡುಕೊಂಡನು ಮತ್ತು ಸುಂದರವಾದ ಉತ್ಪಾದನೆಕೊಡುವ ಈ ದನಗಾವಲವನ್ನಾಗಿ ಮಾರ್ಪಡಿಸಿದನು ಎಂದು ಹೇಳುವನು. ತನ್ನ ಕಾರ್ಯದ ಅನುಕೂಲತೆಗಾಗಿ ಯೋಗ್ಯ ಸ್ಥಳಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿದ ಬಗ್ಗೆ ಹೇಳುವಾಗ ಅವನ ಮುಖವು ಪ್ರಕಾಶಿಸುವದನ್ನು ಮತ್ತು ಅವನ ಸ್ವರದಲ್ಲಿ ಹೆಮ್ಮೆಯಿರುವುದನ್ನು ನೀವು ಗಮನಿಸುವಿರಿ. ಜಾಗರೂಕತೆಯಿಂದ ಆಯ್ದುಕೊಂಡ, ಸುಧಾರಿಸಿದ ಮತ್ತು ದೊಡ್ಡ ಗುಂಪಾಗಿ ಬೆಳೆದ ದನಗಳನ್ನು ಅವನು ನಿಮಗೆ ತೋರಿಸುವನು, ಆಶಾಭಾವದಿಂದ ಮತ್ತು ಭಾವೋದ್ವೇಗದಿಂದ, ತನ್ನ ಫಾರ್ಮಿಗಾಗಿ ಇರುವ ಭವಿಷ್ಯದ ಯೋಜನೆಗಳನ್ನು ಅವನು ವಿವರಿಸುವನು.

ಅವನ ಸಂಭಾಷಣೆಯ ನಂತರ, ಅವನು ತನ್ನ ಜೀವನದೊಂದಿಗೆ ಏನು ಮಾಡುತ್ತಿರುವನೆಂಬುದರ ಬಗ್ಗೆ ನೀವು ಆಶ್ಚರ್ಯಪಡಬೇಕಾಗಿರುವದಿಲ್ಲ. ಅವನು ಹೇಳಿದ ಮತ್ತು ಮಾಡಿದ ಪ್ರತಿಯೊಂದು ಅವನ ಫಾರ್ಮ, ಅವನ ಕೆಲಸ ಹಾಗೂ ಪ್ರೀತಿ ಆಗಿದೆ ಎಂಬುದನ್ನು ನಿಮಗೆ ತಿಳಿಸಿತು. ಅದು ಅವನ ಜೀವನದ ಕೆಲಸವಾಗಿತ್ತು ಮತ್ತು ಆಗಿರುವುದು. ಅವನು ವ್ಯಯಿಸಿದ ಸಾಮರ್ಥ್ಯದಿಂದ, ಅವನು ಖರ್ಚುಮಾಡಿದ

ಹಣದಿಂದ, ಮತ್ತು ಭವಿಷ್ಯಕ್ಕಾಗಿ ಅವನು ಮಾಡಿದ ಯೋಜನೆಗಳಿಂದ, ಈ ಫಾರ್ಮು ಅವನ ಧ್ಯೇಯಗಳ ಕೇಂದ್ರದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಸಂಭಾಷಣೆಯ ಪ್ರತಿಯೊಂದು ಭಾಗವು ಅವನ ಫಾರ್ಮು ಅವನ ಹೃದಯವಾಗಿತ್ತು ಎಂಬ ಸತ್ಯವನ್ನು ತೋರಿಸುತ್ತದೆ.

ಅದೇ ಅವಲೋಕನೆಯು ದೇವರ ಬಗ್ಗೆ ಮಾಡಲ್ಪಡತಕ್ಕದ್ದು. ಸಭೆಯು ಸಮಯದ ಪ್ರಾರಂಭದಿಂದ ಆತನ ಯೋಜನೆಯಾಗಿದೆ. ರಕ್ಷಣೆಯ ಚರಿತ್ರೆಯ ಹಳೇ ಒಡಂಬಡಿಕೆಯ ದೀರ್ಘವಾದ ವರ್ಷಗಳಲ್ಲಿ ಅದು ಪ್ರವಾದನೆಯ ಕೇಂದ್ರವಾಗಿತ್ತು. ಮತ್ತು ನಮ್ಮ ಕರ್ತನ ಭೂಲೋಕದ ಸೇವೆಯ ಪರಿಣಾಮದ ಉತ್ಪಾದನೆಯಾಗಿತ್ತು. ಶಿಲುಬೆಯ ಮೇಲಿನ ಆತನ ಮರಣವು ಜಗತ್ತಿನ ರಕ್ಷಣೆಗಾಗಿ ದೇವರ ಅತಿಶ್ರೇಷ್ಠವಾದ ಯೋಜನೆಯು ಕ್ರಿಸ್ತನು ಮತ್ತು ಆತನ ಸಭೆಯಾಗಿರುವುದು ಎಂಬುದನ್ನು ತಪ್ಪಿಲ್ಲದೇ ಸಿದ್ಧಪಡಿಸುತ್ತದೆ. ಮಾನವ ಚರಿತ್ರೆಗಿಂತ ಮೊದಲು, ಸಭೆಯನ್ನು ಅಸ್ತಿತ್ವದಲ್ಲಿ ತರುವುದು ದೇವರ ಪ್ರಯೋಜನಕರವಾದ ಅಪೇಕ್ಷೆಯಾಗಿತ್ತು; ಈಗ ಆತನು ಆ ಅಪೇಕ್ಷೆಯನ್ನು ವಾಸ್ತವಿಕತೆಯನ್ನಾಗಿ ಮಾಡಿದ್ದರಿಂದ, ಸಭೆಯ ಪ್ರಸಾರಣೆ ಮತ್ತು ಬೆಳವಣಿಗೆಯು ಜಗತ್ತಿನಲ್ಲಿ ಆತನ ಸತತ ಕಾರ್ಯವಾಗಿದೆ.

"ಜೀವನದ ವ್ಯವಹಾರವು, ದೇವರು ಯಾವ ಮಾರ್ಗದಲ್ಲಿ ಹೋಗುತ್ತಿದ್ದಾನೆ ಮತ್ತು ಆ ದಿಕ್ಕಿನಲ್ಲಿ ನಾವು ಹೋಗುತ್ತಿರುವದನ್ನು ನೀವು ಕಂಡುಕೊಳ್ಳುವುದಕ್ಕಿಂತ ಹೆಚ್ಚಿನದು ಇರುವದಿಲ್ಲ" ಎಂದು ಒಬ್ಬರು ಹೇಳಿದ್ದಾರೆ. ದೇವರ ನಿತ್ಯ ಉದ್ದೇಶವನ್ನು ಅದು ಏನಾಗಿದೆ ಮತ್ತು ಆತನು ಅದನ್ನು ಹೇಗೆ ನೆರವೇರಿಸುತ್ತಿದ್ದಾನೆ - ಎಂಬುದನ್ನು ನಾವು ಗುರುತಿಸಿದರೆ, ದೇವರು ಯಾವ ಮಾರ್ಗದಲ್ಲಿ ಹೋಗುತ್ತಿದ್ದಾನೆ ಮತ್ತು ನಮ್ಮಲ್ಲಿಯೂ ಜಗತ್ತಿನ್ನಲ್ಲಿಯೂ ದೇವರು ಏನನ್ನು ಹುಡುಕುತ್ತಿದ್ದಾನೆ ಎಂಬುದು ಮನಸ್ಸಿನಲ್ಲಿ ಇರುವುದು. ಪೌಲನು ಎಫೆಸ 3:10, 11ರಲ್ಲಿ ಸಭೆಯು ದೇವರ ನಿತ್ಯ ಉದ್ದೇಶದ ನೆರವೇರಿಕೆಯಾಗಿರುವುದು ಎಂದು ವಿವರಿಸಿದ್ದಾನೆ, ಮತ್ತು ಅದರಿಂದ ಆತನನ್ನು ಮೆಚ್ಚಿಸುವದಕ್ಕಾಗಿ ತಪ್ಪಿಲ್ಲದ ಮಾರ್ಗವನ್ನು ನಮಗೆ ಕೊಟ್ಟಿದ್ದಾನೆ. ದೇವರೊಂದಿಗೆ ಸರಿಯಾಗಿ ಇರುವೆವು ಎಂಬ ಭರವಸೆ ಕೊಡುವ ಒಂದೇ ಮಾರ್ಗವು ನಾವು ಆತನ ಸಭೆಯಾಗುವುದು, ಆತನ ಸಭೆಯಂತೆ ನಂಬಿಗಸ್ತಿಕೆಯಿಂದ ನೆಲೆಗೊಳ್ಳುವುದು ಮತ್ತು ಆತನನ್ನು ಮಹಿಮೆಪಡಿಸುವುದು ಆಗಿರುತ್ತದೆ.

## ಅದು ಪ್ರಾಮುಖ್ಯತೆಯನ್ನು ಸೂಚಿಸುತ್ತದೆ

ಇದಲ್ಲದೇ, ಸಭೆಯು ದೇವರ "ನಿತ್ಯ ಉದ್ದೇಶದಂತೆ" ಎಂಬ ತತ್ವವು ಸಭೆಯ ಪರಿಶುದ್ಧ ಪ್ರಾಮುಖ್ಯತೆಯನ್ನು ನಮಗೆ ತೋರಿಸುತ್ತದೆ. ಸಭೆಯು ದೇವರ ದೈವಿಕ ನಕ್ಷೆಯ ವ್ಯಕ್ತಪಡಿಸುವಿಕೆಯಾಗಿದ್ದರೆ, ಆಗ ದೇವರಿಗೆ ಸಭೆಯ ಬೆಲೆಯ ಬಗ್ಗೆ ಯೋಚಿಸಿರಿ.

ಸಭೆಯ ಅಸ್ತಿತ್ವವು ಕ್ರಿಸ್ತನ ಶಿಲುಬೆಯನ್ನು ಬಿಟ್ಟು ಅರ್ಥಮಾಡಿಕೊಳ್ಳಲ್ಪಡಲಾರದು ಇಲ್ಲವೇ ಮೆಚ್ಚಿಕೊಳ್ಳಲ್ಪಡಲಾರದು.[2] ದೇವರ ಕುಮಾರನಾದ ಯೇಸುವಿನ ಮರಣವು ಸಭೆಯು ಇರುವದರ ಅಸ್ತಿವಾರವಾಗಿದೆ ಮತ್ತು ಅದರೊಳಗಿಂದ ಅದು ಬೆಳೆಯುತ್ತದೆ. ಕರುಣೆಯಲ್ಲಿ ಐಶ್ವರ್ಯವಂತನಾದ ದೇವರು ಸಭೆಯನ್ನು ಉತ್ಪಾದಿಸಲು (ಎಫೆಸ 2:4 5), ಸಭೆಯನ್ನು ಪರಿಪಾಲಿಸಲು (1 ಯೋಹಾನ 1:7), ಮತ್ತು ಸಭೆಯನ್ನು ಸೇವೆಗೆ ನೇಮಿಸಲು (2 ಕೊರಿಂಥ 5:18, 19) ಶಿಲುಬೆಗಾಗಿ ಯೋಚಿಸಿದನು. ಆದುದರಿಂದ, ಕ್ರಿಸ್ತನ ದೇಹವನ್ನು ಆತನ ಮರಣದಲ್ಲಿ ಬಾಪ್ತಿಸ್ಮ ಹೊಂದುವದರಿಂದ

ಪ್ರವೇಶಿಸುತ್ತೇವೆ (ರೋಮಾಪುರ 6:3); ಮತ್ತು ಆ ದೇಹದ ನಂಬಿಗಸ್ತ ಸದಸ್ಯರಂತೆ ಆತನ ವಾಕ್ಯದ ಬೆಳಕಿನಲ್ಲಿ ನಡೆಯುವಂತೆ, ಆತನ ರಕ್ತದ ಮುಖಾಂತರ ಸತತವಾಗಿ ಪಾಪದಿಂದ ಶುದ್ಧೀಕರಿಸಲ್ಪಡುತ್ತೇವೆ, ಹೀಗೆ ಹೊಸ ಒಡಂಬಡಿಕೆಯ ಸಭೆಯು (ಸ್ಥಳಿಕ ಅರ್ಥದಲ್ಲಿ) ಆತನ ರಕ್ತದ ಮುಖಾಂತರ ಕ್ರಿಸ್ತನ ಆತ್ಮಿಕ ದೇಹವನ್ನು ಪ್ರವೇಶಿಸಿದ ಜನರ ಒಂದು ಗುಂಪಾಗಿರುತ್ತದೆ, ಅವರು ಆ ದೇಹದಂತೆ ನಡೆಯುತ್ತಿರುವರು, ಕಾರ್ಯಮಾಡುತ್ತಿರುವರು ಮತ್ತು ಆರಾಧಿಸುತ್ತಿರುವರು, ದೇವರ ಆತ್ಮನಿಂದ ಮತ್ತು ಕ್ರಿಸ್ತನ ಬಲದಿಂದ ಸಹಾಯಹೊಂದಿ, ಬಲಪಡಿಸಲ್ಪಡುತ್ತಿರುವರು. ಇದು ಜಗತ್ತಿನ ರಕ್ಷಣೆಗಾಗಿ ದೇವರ ಯೋಜನೆ ಆಗಿರುವದು.

ಹೊಸ ಒಡಂಬಡಿಕೆಯ ಸಭೆಯಿಂದ ಹೊರಗೆ ಇರುವವರು ದೇವರ ನಿತ್ಯವಾದ ಉದ್ದೇಶದ ಹೊರಗೆ ಇರುವರು, ಮತ್ತು ದೇವರ ನಿತ್ಯವಾದ ಉದ್ದೇಶದಿಂದ ಹೊರಗೆ ಇರವವರು ದೇವರ ವಿಮೋಚನಾ ಕಾರ್ಯದ ಹೊರಗೆ ಇರುವರು. ಸಭೆಯನ್ನು ಕುರಿತಾದ ಈ ಸತ್ಯವು ಎರಡು ಪ್ರಮುಖ ಸತ್ಯಗಳನ್ನು ಕಲ್ಪಿಸಿಕೊಳ್ಳುವುದು. (1) ದೇವರು ಲೋಕದಲ್ಲಿ ಮನುಷ್ಯನ ರಕ್ಷಣೆಯನ್ನು ತರುವದನ್ನು ಹುಡುಕುತ್ತ ಕಾರ್ಯನಿರತನಾಗಿರುವನು. ಆತನು ವಿಮೋಚನೆಯ ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಕಾರ್ಯನಿರತನಾಗಿರುವನು. ಆತನು ಅದನ್ನು ಜಗತ್ತು ಪ್ರಾರಂಭವಾಗುವದಕ್ಕಿಂತ ಮೊದಲು ಯೋಚಿಸಿದನು ಮತ್ತು ಪೋಷಿಸಿದನು, ಮಾರ್ಗದರ್ಶನ ಮಾಡಿದನು ಹಾಗೂ ಜಗತ್ತಿನ ಅಸ್ತಿತ್ವದಲ್ಲೆಲ್ಲಾ ಆಶೀರ್ವದಿಸಿದನು. ಅದು ದೇವರ ಆಯ್ಕೆಯ ಕೆಲಸವಾಗಿರುವುದು, ಮಾನವನಿಗಾಗಿ ಆತನ ಮಹಾ ಪ್ರೀತಿಯಿಂದ ಹೊರಟು ಬಂದಿತು ಮತ್ತು ಪೌಲನಿಂದ ಅದು ಆತನ "ನಿತ್ಯ ಉದ್ದೇಶ" ಎಂದು ವಿವರಿಸಲ್ಪಟ್ಟಿತು (ಎಫೆಸ 3:11). (2) ಹೊಸ ಒಡಂಬಡಿಕೆಯ ಸಭೆಯು ದೇವರ ನಿತ್ಯ ಉದ್ದೇಶದ ವಿಧಾನ, ಸಾಕಾರಗೊಳ್ಳುವಿಕೆ ಮತ್ತು ವಾಸ್ತವಿಕತೆಯಾಗಿರುತ್ತದೆ.

ರಕ್ಷಣೆಯ ದೇವರ ಮಾರ್ಗವು ಮದುವೆಗೆ ಹೋಲಿಸಲ್ಪಡಬಹುದು. ಮನೆಗಾಗಿ ಮತ್ತು ಜನ್ಮಕೊಡುವಿಕೆಗಾಗಿ ದೇವರಿಗೆ ಒಂದು ಯೋಜನೆಯಿರುವುದು. ಆ ಯೋಜನೆಯು ಯಾವುದು? ನಾವೆಲ್ಲರೂ ಉತ್ತರವನ್ನು ಬಲ್ಲವರಾಗಿದ್ದೇವೆ: ಅದು ಮದುವೆ ಆಗಿರುತ್ತದೆ. ಪರಿಶುದ್ಧ ಬರಹಗಳ ಸರಳ ಬೋಧನೆಯ ತಳಹದಿಯ ಮೇಲೆ, ಕುಟುಂಬದ ಸಂತೋಷಕ್ಕಾಗಿ ದೇವರ ನಿತ್ಯವಾದ ಉದ್ದೇಶವು ಪುರುಷನಿಗೂ ಮತ್ತು ಸ್ತ್ರೀಗೂ ತನ್ನ ನಿಯಮದ ಅಧೀನತೆಯಲ್ಲಿ ಗಂಡ ಮತ್ತು ಹೆಂಡತಿಯಂತೆ ಜೀವಿಸುವುದಾಗಿದೆ. ಪುರುಷನ ಹಾಗೂ ಸ್ತ್ರೀಯ ಸೃಷ್ಟಿಯ ಸಮಯದಲ್ಲಿ, ದೇವರು ಮದುವೆಗಾಗಿ ಮತ್ತು ಲೋಕದೊಳಗೆ ಮಕ್ಕಳನ್ನು ತರುವ ತನ್ನ ಯೋಜನೆಯನ್ನು ತಿಳಿಸಿದನು. ಕಾನೂನು ಬದ್ಧ ಮದುವೆಯ ಹೊರಗೆ ಜಗತ್ತಿನಲ್ಲಿ ಮಕ್ಕಳು ತರಲ್ಪಡಬಹುದೋ? ಹೌದು. ಕಾನೂನು ಬದ್ಧ ಮದುವೆಯ ಹೊರಗೆ ಜನರು ಸುಖವನ್ನೂ ಆದರಣೆಯನ್ನೂ ಹುಡುಕುತ್ತಿರುವರೋ? ಹೌದು. ಹೀಗಿದ್ದರೂ ಇದು ಸಂಭವಿಸುವಾಗ ದೇವರ ಚಿತ್ತವು ಕಡೆಗಣಿಸಲ್ಪಡುತ್ತದೆ ಮತ್ತು ಸಂತಾನೋತ್ಪತ್ತಿಗಾಗಿಯೂ ಕುಟುಂಬದ ಸುಖಕ್ಕಾಗಿಯೂ ಇರುವ ಆತನ ಉದ್ದೇಶವು ಹಾಳುಮಾಡಲ್ಪಡುತ್ತದೆ. ಮಗುವಿಗೂ ಇಲ್ಲವೇ ಆ ಮಗುವಿನ ತಂದೆತಾಯಿಗಳಿಗೂ ದೇವರು ನೇಮಿಸಿದ ಮದುವೆಯ ಹೊರಗಿನ ಮನೆಯಲ್ಲಿ ಜೀವಿಸುವುದೂ ಉತ್ತಮವಾಗಿರುವುದೋ? ಇಲ್ಲ. ಯಾಕೆ? ಅವರು ಸಮಾಜಕ್ಕಾಗಿ ಮತ್ತು ವೈಯಕ್ತಿಕ ಸುಖಕ್ಕಾಗಿ ದೇವರ ಯೋಜನೆಯನ್ನು ಅವರು ಕಳೆದುಕೊಳ್ಳುವರು!

*ಮಾನವ ಚರಿತ್ರೆಗಿಂತ ಮೊದಲು,*
*ಸಭೆಯನ್ನು ಅಸ್ತಿತ್ವದಲ್ಲಿ ತರುವುದು*
*ದೇವರ ಔದಾರ್ಯದ ಅಪೇಕ್ಷೆಯಾಗಿತ್ತು;*
*ಈಗ ... ಸಭೆಯ ಪ್ರಸಾರ ಮತ್ತು*
*ಬೆಳವಣಿಗೆಯು ಜಗತ್ತಿನಲ್ಲಿ ಆತನ*
*ನಿರಂತರ ಕಾರ್ಯವಾಗಿದೆ.*

ಹೊಸ ಒಡಂಬಡಿಕೆಯ ಸಭೆಯು ಜಗತ್ತಿನ ರಕ್ಷಣೆಗಾಗಿ ದೇವರ ಯೋಜನೆಯಾಗಿದೆ. ಅದು ಆತನ ಒಂದೇ ಮತ್ತು ಕೇವಲ ಯೋಜನೆಯಾಗಿದೆ. ಹೊಸ ಒಡಂಬಡಿಕೆಯ ಸಭೆಯನ್ನು ನಾವು ಕಡೆಗಣಿಸಿದರೆ ಏನಾಗುತ್ತದೆ? ನಿಜವಾದ ಸಭೆಯಾಗಿರದ ಧಾರ್ಮಿಕ ಸಂಘದಲ್ಲಿ ನಮಗೆ ಧಾರ್ಮಿಕ ಚಟುವಟಿಕೆಗಳು ಇರಬಹುದೋ? ಹೌದು ಸಭೆಯಿಂದ ಬೇರೆಯಾದ ಮತ್ತು ಸಭೆಯನ್ನು ಹೊರತು ಪಡಿಸಿ ಚಿನ್ನದ - ಅರ್ಥವುಳ್ಳ ಜನರ ಒಂದು ಗುಂಪಿನಂತೆ ನಾವು ದಯೆಯ ಆಶ್ಚರ್ಯಕರವಾದ ಕಾರ್ಯಗಳನ್ನು ನಾವು ಮಾಡಬಹುದೋ? ಹೌದು, ಹೀಗಿದ್ದರೂ ಮಹತ್ವದ ಪ್ರಶ್ನೆಯು ಇದಾಗಿರುತ್ತದೆ: "ನಾವು ದೇವರ ನಿತ್ಯವಾದ ಉದ್ದೇಶವನ್ನು ನೆರವೇರಿಸುತ್ತಿದ್ದೇವೋ?" ಪರಿಶುದ್ಧ ಬರಹಗಳಿಗೆ ಅನುಗುಣವಾಗಿ ಉತ್ತರವು "ಇಲ್ಲ" ಎಂದಾಗಿರುತ್ತದೆ. ದೇವರ ನಿತ್ಯ ಉದ್ದೇಶದ ಹೊರಗೆ ನಾವು ದೇವರ ಚಿತ್ತವನ್ನು ಸಾಧಿಸಬಹುದೋ? ಪುನಃ ಉತ್ತರವು "ಇಲ್ಲ" ಎಂದಾಗಿರುತ್ತದೆ.

ಕ್ರಿಸ್ತನ ದೇಹದಂತೆ ಹೊಸ ಒಡಂಬಡಿಕೆಯ ಸಭೆಯಂತೆ ಮಾತ್ರವೇ ನಾವು ದೇವರ "ನಿತ್ಯವಾದ ಉದ್ದೇಶದ" ನೆರವೇರಿಸುವಿಕೆಯನ್ನು ಅನುಭವಿಸುವುದು ಸತ್ಯ ವಾಗಿರುವದರಿಂದ, ಒಬ್ಬನು ಆ ಸಭೆಯಂತೆ ಜೀವಿಸುವವರೆಗೆ ಯಾವನೂ ತೃಪ್ತಿ ಹೊಂದುವದಿಲ್ಲ ಎಂದು ಹೇಳಬೇಕಾಗುತ್ತದೆ. ಅವನು ಕರ್ತನ ಸಭೆಯಾಗುವಾಗ, ಅವನು ದೇವರು ತನ್ನೊಂದಿಗೆ ಲೋಕವನ್ನು ಸಂಧಾನಪಡಿಸುವದಕ್ಕಾಗಿ ಇರುವ ಆತನ ಕೃಪಾಭರಿತವಾದ ನಕ್ಷೆಯೊಳಗೆ ಆವನು ಇರುವನು.

## ಅದು ಶಾಶ್ವತ ಗುಣವನ್ನು ಘೋಷಿಸುತ್ತದೆ

ಇದಲ್ಲದೆ, ಸಭೆಯು ದೇವರ "ನಿತ್ಯ ಉದ್ದೇಶವಾಗಿದೆ" ಎಂಬುದು ಸಭೆಯ ಆದಿ ಸ್ಥಿತಿಯ ಸ್ಥಿರತೆಯನ್ನು ಘೋಷಿಸುತ್ತದೆ. ಸಭೆಯು ಮನುಷ್ಯನ ಅಗತ್ಯತೆಗಳು ಅದರ ಸ್ಥಳದಲ್ಲಿ ಇಡಲ್ಪಡುವ ಹೆಚ್ಚು ತಕ್ಕದ್ದಾದದ್ದು ಬರುವವರೆಗೆ ತಾತ್ಕಾಲಿಕವಾದ ಪರ್ಯಾಯ ವಾಗಿರುವದಿಲ್ಲ. ಅದು ಯೋಜನೆಯು ತರಲ್ಪಡುವವರೆಗೆ ಏರ್ಪಡಿಸಲ್ಪಟ್ಟ ಒಂದು ಯೋಜನೆ ಆಗಿರುವದಿಲ್ಲ.

ಸಭೆಯು ಕ್ರೈಸ್ತ ಯುಗಕ್ಕೆ ದೇವರ ಯೋಜನೆಯಾಗಿದೆ. "ದೇವರಿಗೆ ಸಭೆಯಲ್ಲಿಯೂ ಕ್ರಿಸ್ತಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್" (ಎಫೆಸ 3:21) ಎಂದು ಪೌಲನು ಹೇಳಿದನು. ಸಭೆಯು ದೇವರ ರಾಜ್ಯ ದಂತೆ ಸ್ಥಾಪಿಸಲ್ಪಟ್ಟಿತೆ (ದಾನಿಯಲು 2:44; ಮತ್ತಾಯ 16:18), ನಾವು ಈಗ ಆತನ ಕುಟುಂಬದಂತೆ ಇದನ್ನು ಪರಲೋಕ ರಾಜ್ಯದ ಭೂಲೋಕದ ವ್ಯಕ್ತಪಡಿಸುವಿಕೆಯಂತೆ ಅನುಭವಿಸುವೆವು ಮತ್ತು ನಾವು ಮಹಿಮೆಯಲ್ಲಿ ಪ್ರವೇಶಿಸುವಾಗ ಪೂರ್ಣವಾದ ಅರ್ಥದಲ್ಲಿ ಅನುಭವಿಸುವೆವು (2 ಪೇತ್ರ 1:11).

ಸಭೆಯ ರೂಪದಲ್ಲಿ ಜಗತ್ತಿನೊಳಗೆ ತನ್ನ ಆತ್ಮಿಕ ರಾಜ್ಯವನ್ನು ದೇವರು

ತರುವ ಮೊದಲು ಅನೇಕ ವರ್ಷಗಳ ಸಿದ್ಧತೆಯು ಬೇಕಾಗಿತ್ತು. ವಾಗ್ದತ್ತ ಮೆಸ್ಸೀಯನ ಮೊದಲನೆಯ ನೋಟವು ಆದಿಕಾಂಡ 3:15ರಲ್ಲಿ ಇರವಂತೆ ಕಾಣುತ್ತದೆ, ಅಲ್ಲಿ ಸೈತಾನನ ಮೇಲೆ ಜಯವು ಸೂಚಿಸಲ್ಪಟ್ಟು ಪ್ರವಾದನೆಯು ಹೇಳಲ್ಪಟ್ಟಿದೆ. ಅನಂತರದಲ್ಲಿ ಪಿತೃಗಳ ಯುಗದಲ್ಲಿ, ಮೆಸ್ಸೀಯನ ಬಗ್ಗೆ ಅಬ್ರಹಾಮನಿಗೆ ಒಂದು ನಿರ್ದಿಷ್ಟವಾದ ವಾಗ್ದಾನವು ಮಾಡಲ್ಪಟ್ಟಿತು: "ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು" (ಆದಿಕಾಂಡ 12:3; ಹೋಶೇಯ 13:15; ಗಲಾತ್ಯ 3:16). ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಮತ್ತು ಯೇಸುವಿನಲ್ಲಿ ಆತನು ಆ ವಾಗ್ದಾನವನ್ನು ನೆರವೇರಿಸಿದ್ದರ ಮಧ್ಯದಲ್ಲಿ ಮೋಶೆಯ ಧರ್ಮಶಾಸ್ತ್ರವು ಸೇರಿಸಲ್ಪಟ್ಟಿತು (ಗಲಾತ್ಯ 3:19), ಆದುದರಿಂದ, ಪಿತೃಗಳ ಮತ್ತು ಮೋಶೆಯ ಯುಗಗಳು ಮೆಸ್ಸೀಯನ ಬರೋಣಕ್ಕಾಗಿ ಹಾಗೂ ಆತನ ರಾಜ್ಯದ ಸ್ಥಾಪನೆಗಾಗಿ ಅಗತ್ಯವಾದ ಸಿದ್ಧತೆಯನ್ನು ಒದಗಿಸಿದವು. ತನ್ನ ವೈಯಕ್ತಿಕ ಸೇವೆಯ ಅವಧಿಯಲ್ಲಿ, ಯೇಸುವು ತನ್ನ ಬೋಧನೆಗಳ, ಹನ್ನೆರಡು ಅಪೊಸ್ತಲರಿಗೆ ತರಬೇತಿಯ, ತನ್ನ ಆದರ್ಶದ, ತನ್ನ ಮರಣದ ಮತ್ತು ಪುನರುತ್ಥಾನದ ಹಾಗೂ ತನ್ನ ಪುನರುತ್ಥಾನದ ನಂತರದ ಕಾಣಿಸಿಕೊಳ್ಳುವಿಕೆಗಳ ಮುಖಾಂತರ ರಾಜ್ಯಕ್ಕಾಗಿ ಅಸ್ತಿವಾರವನ್ನು ಹಾಕಿದನು.

ಅಪೊಸ್ತಲರ ಕೃತ್ಯಗಳು 2ರ ಪ್ರಕಾರ, ದೇವರ ರಾಜ್ಯವು ಪಂಚಾಶತ್ತಮದ ದಿನದಂದು ಬಲದೊಂದಿಗೆ ಬಂದಿತು (ನೋಡಿರಿ ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:8), ಆಗ ಸಭೆಯು ಸ್ಥಾಪಿಸಲ್ಪಟ್ಟಿತು. ಕ್ರೈಸ್ತರನ್ನು ಕ್ರಿಸ್ತನ ದೇಹದ ಸದಸ್ಯರಂತೆ ನೋಡುವಾಗ, ಅವರನ್ನು ನಾವು ಸಭೆ ಎಂದು ಗುರುತಿಸುತ್ತೇವೆ; ಕ್ರೈಸ್ತರನ್ನು ದೇವರ ಆಳ್ವಿಕೆಗೆ ಸಮರ್ಪಿಸಿಕೊಂಡ ಜನರಂತೆ ನೋಡುವಾಗ, ಅವರನ್ನು ನಾವು ದೇವರ ರಾಜ್ಯದಂತೆ ನೋಡುತ್ತೇವೆ. ಸಭೆಯು, ಕ್ರಿಸ್ತನ ಆತ್ಮಿಕ ದೇಹವು, ದೇವರು ಆದಾಮನನ್ನು ಸೃಷ್ಟಿಸುವದಕ್ಕಿಂತ ಮೊದಲು ತನ್ನ ಮನಸ್ಸಿನಲ್ಲಿ ನೀಲನಕ್ಷೆ ಮಾಡಿದ ಪರಿಶುದ್ಧ ಯೋಜನೆಯಾಗಿದೆ.

ಪೌಲನ ಪ್ರಕಾರವಾಗಿ, ಸಭೆಯ ಮುಖಾಂತರವಾಗಿ - ಈ ಮಾತ್ರವೇ - ದೇವದೂತರು ದೇವರ ಜ್ಞಾನದ ಮತ್ತು ವರ್ಷಗಳ ರೂಪಿಸುವಿಕೆಯ ನೆರವೇರುವಿಕೆಯನ್ನು ನೋಡಬಹುದು. "ಅನಾದಿ ಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಗೊತ್ತಾಗಬೇಕು ..." ಎಂದು ಪೌಲನು ಬರೆದನು (ಎಫೆಸ 3:10). "ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ" ಎಂಬುದು ದೇವದೂತರಿಗೆ ಅನ್ವಯಿಸುತ್ತದೆ. ಅವರು ಇರುವಲ್ಲಿಂದಲೇ, ಕ್ರಿಸ್ತನ ಆತ್ಮಿಕ ದೇಹವಾದ ಸಭೆಯ ಕಡೆಗೆ ನೋಡಿ, ಹೀಗೆ ಹೇಳಬಹುದು, "ಈಗ ನಾವು ನೋಡುತ್ತೇವೆ, ಈಗ ನಾವು ಅರ್ಥ ಮಾಡಿಕೊಳ್ಳುತ್ತೇವೆ. ವರ್ಷಗಳಿಂದ ದೇವರು ನೆರವೇರಸಲು ಕಾರ್ಯಮಾಡುತ್ತಿರುವದು ಈಗ ಅಂತಿಮವಾಗಿ ಸ್ಪಷ್ಟವಾಗಿದೆ. ಅಂತಿಮವಾಗಿ, ಆತನ ನಿತ್ಯ ಉದ್ದೇಶದ ನೆರವೇರುವಿಕೆಯನ್ನು ನಾವು ನೋಡುತ್ತೇವೆ." ವಿಮೋಚನೆಯು ಏನಾಗಿರುವದೆಂಬುದನ್ನು ದೇವದೂತರು ತಿಳಿದಿರುವದಿಲ್ಲ, ಯಾಕಂದರೆ ಅವರು ವಿಮೋಚನೆಯನ್ನು ಅನುಭವಿಸಿರುವದಿಲ್ಲ (1 ಪೇತ್ರ 2:4). ಬಹುಶಃ, ಇದು ಪೇತ್ರನ ಪ್ರೇರೇಪಿತ ಹೇಳಿಕೆಯ ಅರ್ಥವೂ ಆಗಿರಬಹುದು. "ಈ ಸಂಗತಿಗಳನ್ನು ಮುಂತಿಳಿಸುವದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದರೆಂಬದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪರಿಶುದ್ಧಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿ ಮಾಡಲ್ಪಟ್ಟಿದೆ, *ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು*

*ನೋಡಬೇಕೆಂಬ ಅಪೇಕ್ಷೆ ಉಂಟು*" (1 ಪೇತ್ರ 1:12; ಒತ್ತಿ ಹೇಳಿದ್ದು ನನ್ನದು).

ಹಾರ್ಡಿಂಗ್ ಯುನಿವರ್ಸಿಟಿಯಲ್ಲಿ ನನ್ನ ವಿದ್ಯಾರ್ಥಿಗಳಿಗೆ ಯಾವಾಗಲೂ ಅವರು ದೇವದೂತರಿಂದ ಗಮನಿಸಲ್ಪಡುತ್ತಿರುವರೆಂದು ನಾನು ಜ್ಞಾಪಿಸುತ್ತಿರುತ್ತೇನೆ. "ನೀನು ಕ್ರೈಸ್ತನಂತೆ ಕ್ಯಾಂಪಸ್ಸಿನಲ್ಲಿ ನಡೆದಾಡು, ಭೂಮಿಯ ಮೇಲೆ ಆತನ ಆತ್ಮಿಕ ದೇಹದಂತೆ ಕ್ರಿಸ್ತನಿಗಾಗಿ ಜೀವಿಸು, ದೇವದೂತರು ನಿನ್ನನ್ನು ನೋಡುತ್ತಿರುವರು, 'ಅಹಾ, ಒಬ್ಬ ಕ್ರೈಸ್ತನಾಗಿರುವುದು ಏನು ಎಂಬದರ ಅರ್ಥವನ್ನು ಈಗ ತಿಳಿದಿದ್ದೇವೆ. ದೇವರ ಯೋಜನೆಯು ಏನಾಗಿರುವದೆಂದು ನಾವು ಈಗ ನೋಡುತ್ತೇವೆ' " ಎಂದು ಹೇಳಿರಿ. ಈ ಭೂಲೋಕದಲ್ಲಿ ಕ್ರೈಸ್ತರಲ್ಲದವರೂ ಸಹ ನಮ್ಮ ಕಡೆಗೆ ನೋಡಿ, "ದೇವರ ವಾಕ್ಯವು ಸೃಷ್ಟಿಸುವ ಜೀವವು ಇಲ್ಲಿರುವುದು, ಆ ರೀತಿಯ ಜೀವನವನ್ನು ನಾನು ಬಯಸಿದೆ, ಅದನ್ನು ಪಡೆದುಕೊಳ್ಳಲು ನಾನು ದೇವರ ವಿಮೋಚಿಸುವ ಮಾರ್ಗಕ್ಕೆ ನನ್ನನ್ನು ಸಮರ್ಪಿಸಿಕೊಳ್ಳತಕ್ಕದ್ದು" ಎಂದು ಹೇಳಲಿ.

ಕ್ರಿಸ್ತನ ದೇಹದೊಳಗೆ ನಾವು ದೇವರ ನಿತ್ಯ ಉದ್ದೇಶದಲ್ಲಿದ್ದೇವೆ. ಅದು ಜಗತ್ತಿನ ರಕ್ಷಣೆಗಾಗಿ ದೇವರ ಅಂತಿಮ ಉದ್ದೇಶದ ಯೋಜನೆಯಾಗಿರುವುದು ಮತ್ತು ಅದು ನಿತ್ಯತ್ವದಲ್ಲಿ ಪರಲೋಕದ ನಿತ್ಯವಾದ ರಾಜ್ಯದಲ್ಲಿ ನಾವು ಸ್ವೀಕರಿಸಲ್ಪಡುವಂತೆ ಅದರ ಅಂತಿಮ ನೆರವೇರುವಿಕೆಯನ್ನು ನೋಡುವುದು (2 ಪೇತ್ರ 1:10, 11). ಆತನ ಸಭೆಯು ಎರಡು ಜಗತ್ತುಗಳಲ್ಲಿ ಭಾಗವಹಿಸುವುದು: ಅದು ಒಂದು ಇಂದಿನ ಭೂಲೋಕದ ರಾಜ್ಯ ವಾಗಿರುವುದು (ಕೊಲೊಸ್ಸೆ 1:13), ಮತ್ತು ಅದು ಬರಲಿಕ್ಕಿದ್ದ ಪಾರಲೌಕಿಕ ರಾಜ್ಯವಾ ಗಿರುವುದು (2 ತಿಮೊಥೆ 4:1). ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥ ಕರ್ತನು ಈ ರಾಜ್ಯ ವನ್ನು "ಅಲುಗಾಡಿಸಲ್ಪಡದ" ರಾಜ್ಯ ಎಂದು ಕರೆದದ್ದರಲ್ಲಿ ಆಶ್ಚರ್ಯವಿರುವದಿಲ್ಲ (ಇಬ್ರಿಯ 12:27).

## ಮುಕ್ತಾಯ

ಹಾಗಾದರೆ, ಪರಿಶುದ್ಧ ಬರಹಗಳಿಗನುಸಾರವಾಗಿ, ಸಭೆಯು ದೇವರ ಉದ್ದೇಶದ ಜನಾಂಗವಾಗಿದೆ. ಕ್ರಿಸ್ತನ ಆತ್ಮಿಕ ದೇಹದ ಮುಖಾಂತರ ಮನುಷ್ಯನಿಗೆ ರಕ್ಷಣೆಯನ್ನು ಒದಗಿಸುವುದು ದೇವರ ಉದಾರವಾದ ಯೋಜನೆಯಾಗಿತ್ತು. ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮದ ದಿನದಂದು ಸಭೆಯನ್ನು ಸ್ಥಾಪಿಸುವದರಲ್ಲಿ ಆತನ ಪರಿಶುದ್ಧ ಉದ್ದೇಶವು ನೆರವೇರಿತು.

"ನಿತ್ಯ ಉದ್ದೇಶ" ಎಂಬ ಪದಗುಚ್ಛವು ಜಗತ್ತಿನ ರಕ್ಷಣೆಗಾಗಿ ಸಭೆಯು ದೇವರ ನಕ್ಷೆ ಮತ್ತು ತೀರ್ಮಾನ ಆಗಿದೆಯೆಂಬುದನ್ನು ಅನ್ವಯಿಸುತ್ತದೆ. ದೇವರ ನಿತ್ಯ ಉದ್ದೇಶ ವಾಗಿರುವದಕ್ಕಾಗಿ, ಅದಕ್ಕೆ ಮಹತ್ವವೂ ಶಾಶ್ವತತೆಯೂ ಇರುತ್ತದೆ.

ದೇವರು, ವಿಶ್ವದ ಮತ್ತು ಮನುಷ್ಯನ ಸೃಷ್ಟಿಕರ್ತನಂತೆ, ಎಲ್ಲಾ ವಾಸ್ತವಿಕತೆಗ ಳಲ್ಲಿ ಅತಿದೊಡ್ಡ ವಾಸ್ತವಿಕತೆಯಾಗಿದೆ. ಅಸ್ತಿತ್ವದಲ್ಲಿರುವ ಪ್ರತಿಯೊಂದು ದೇವರಂತೆ ಇಲ್ಲವೇ ದೇವರು ಅಲ್ಲ ಎಂಬಂತೆ ವರ್ಗೀಕರಿಸಲ್ಪಡಬಹುದು. ದೇವರು ಇದ್ದಾನೆ, ಮತ್ತು ದೇವರಿಂದ ಸೃಷ್ಟಿಸಲ್ಪಟ್ಟ ವಸ್ತುಗಳೂ ಜೀವಿಗಳೂ ಇರುತ್ತವೆ. ಈ ಎರಡು ವರ್ಗಗಳು ಅಸ್ತಿತ್ವದಲ್ಲಿರುವ ಎಲ್ಲದರ ಒಟ್ಟು ಮೊತ್ತವನ್ನೂ ಒಳಗೊಂಡಿರುತ್ತವೆ. ಈ ಎರಡು ಗುಂಪುಗಳ ಬಗ್ಗೆ ಯೋಚಿಸುವುದು ದೇವರು ಸೃಷ್ಟಿಸಿದ ಜಗತ್ತಿನಲ್ಲಿ ನಮ್ಮ ಸ್ಥಾನವನ್ನು ನೋಡಲು ಮತ್ತು ವಿಶ್ವದಲ್ಲಿ ದೇವರ ಬಲವನ್ನು ಹಾಗೂ ಸರ್ವಾತಿಶಯವನ್ನು ನೋಡಲು ನಮಗೆ ಸಹಾಯ ಮಾಡುವುದು. ನಾವು ಸೃಷ್ಟಿಸಲ್ಪಟ್ಟ ಜೀವಿಗಳು, ಮತ್ತು ದೇವರು ಸರ್ವಶಕ್ತನೂ, ಸರ್ವಜ್ಞಾನಿಯೂ, ಸರ್ವವ್ಯಾಪಿಯೂ ಮತ್ತು ನಿತ್ಯನೂ ಆಗಿದ್ದಾನೆ.

ಆತನೊಂದಿಗೆ ಸಮರಸ್ಯವಿಲ್ಲದೇ ಜೀವಿಸುವುದು, ಯಾವುದೇ ಮಾನವ ಜೀವಿಯು ಮಾಡಬಹುದಾದ ಅತೀ ಕೆಟ್ಟ ತಪ್ಪಾಗಿರುತ್ತದೆ, ವಿರುದ್ಧವಾದದ್ದೂ ಸಹ ಸತ್ಯ ವಾಗಿರುತ್ತದೆ: ಆತನ ಚಿತ್ತದೊಂದಿಗೆ ಒಂದಾಗಿರುವಂಥದ್ದು ಆತನೊಂದಿಗೆ ಸಾಮರಸ್ಯದಲ್ಲಿ ರುವುದಾಗಿದೆ ಮತ್ತು ದೈವಿಕ ನಿರೀಕ್ಷೆಯಿಂದ ಹಾಗೂ ನಿತ್ಯ ವಾಗ್ದಾನದಿಂದ ತುಂಬಿರುವುದಾಗಿರುತ್ತದೆ.

ಕ್ರಿಸ್ತನ ಆತ್ಮಿಕ ದೇಹದ ಹೊರಗೆ ಇರವವನು ಆತನ ನಿತ್ಯವಾದ ಉದ್ದೇಶದ ಹೊರಗೆ ಇರುವವನಾಗಿದ್ದಾನೆ, ಆದುದರಿಂದ, ಕ್ರಿಸ್ತನ ದೇಹದೊಳಗೆ ಪ್ರವೇಶವು, ತನ್ನ ಜೀವನ ಮತ್ತು ಅದೃಷ್ಟದ ಬಗ್ಗೆ ಗಂಭೀರತೆಯಿಂದ ಯೋಚಿಸುವ ಯಾವನಿಗೇ ಆಗಲಿ, ಪ್ರಥಮ ಚಿಂತನೆಯಾಗಿರಬೇಕು.

ಯೇಸುವಿನ ಮಾತುಗಳನ್ನು ಕೇಳೋಣ: "ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5).

ಆತ್ಮನ ಕರೆಗೆ ಕಿವಿಗೊಡೋಣ: "ಆತ್ಮನೂ ಮದಲಗಿತ್ತಿಯೂ - 'ಬಾ' ಅನ್ನುತ್ತಾರೆ, ಕೇಳುವವನು - 'ಬಾ' ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವ ಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17).

ಕ್ರಿಸ್ತನ ಸಭೆಯಾದ ನಂತರ, ನಮ್ಮ ಜೀವಿತಗಳ ಉಳಿದಭಾಗಕ್ಕೆ ಪೌಲನ ಮಾತುಗಳನ್ನು ನಮ್ಮ ಹೃದಯಗಳಿಗೆ ಹಿಡಿದುಕೊಳ್ಳೋಣ: "ಕ್ರಿಸ್ತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು" (ಎಫೆಸ 5:26, 27).

ದೇವರ ನಿತ್ಯವಾದ ಉದ್ದೇಶದೊಳಗೆ ಒಬ್ಬನು ಜೀವಿಸದಿದ್ದರೆ, ಯಾರಿಗೂ ಈ ಲೋಕದಲ್ಲಿ ಜೀವಿಸುವುದಕ್ಕಾಗಿ ನಿಜವಾದ ಉದ್ದೇಶವು ಇರುವದಿಲ್ಲ. ಆತನ ಉದ್ದೇಶದ ಜನರಲ್ಲಿ ನೀನೂ ಒಬ್ಬನಾಗಿರುವಿಯೋ?

---

ಟಿಪ್ಪಣಿಗಳು

[1]R. C. Bell, *Studies in Ephesians* (Austin, Tex.: Firm Foundation Publishing Co., 1971), 16. [2]ಜೇಮ್ಸ್ ಡೀ. ಬೇಲ್ಸ್ ಈ ಸತ್ಯಕ್ಕೆ ಗಮನ ಸೆಳೆದರು. ನೋಡಿರಿ: *The Cross and the Church* (Shreveport, La.: Lambert Book House, n.d.). See also J. D. Thomas, ed., *God's Eternal Purpose,* Abilene Christian College Lectures (Abilene, Tex.: Abilene Christian College Book Store, 1969).

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. "ಆತನ ಕೃಪೆಯ ಐಶ್ವರ್ಯಗಳಿಗೆ ಅನುಸಾರವಾಗಿ" ಎಂಬ ಪದಗುಚ್ಛವನ್ನು ವಿವರಿಸಿರಿ, ನೋಡಿರಿ ಎಫೆಸ 1:7.
2. "ದೇವರ ನಿತ್ಯವಾದ ಉದ್ದೇಶ" ಎಂಬ ಮಾತುಗಳ ಅರ್ಥವನ್ನು ಚರ್ಚಿಸಿರಿ. ಓದಿರಿ ಎಫೆಸ 3:11.

3. ಜಗದುತ್ಪತ್ತಿಗೆ ಮೊದಲೇ ದೇವರು ಯೇಸುವಿನ ಮರಣವನ್ನು ನಿರ್ಣಯಸಿದ್ದನೋ? ಹಾಗಿದ್ದರೆ, ಯಾಕೆ?
4. "ಕಾಲವು ಪರಿಪೂರ್ಣವಾದಾಗ" ಎಂಬ ಮಾತು ಏನನ್ನು ತಿಳಿಸುತ್ತದೆ?
5. ಸಭೆಯು ದೇವರ ಯೋಜನೆಗೆ ಒಂದು ಕೂಡಿಸುವೆಯಾಗಿದೆಯೋ ಇಲ್ಲವೇ ಸಭೆಯು ತಾನೆ ಯೋಜನೆಯಾಗಿದೆಯೋ? ವಿವರಿಸಿರಿ.
6. ದೇವರ ಮಕ್ಕಳು ಸಭೆಯನ್ನು ರಚಿಸುವವರಾಗಿದ್ದರೆ, ಆತನ ಸಭೆಯಾಗಿರದೇ ಒಬ್ಬನು ದೇವರ ಮಗುವಾಗಬಹುದೋ?
7. ಸಭೆ ಶಿಲುಬೆಯಿಂದ ಹೇಗೆ ಅಸ್ತಿತ್ವದಲ್ಲಿ ತರಲ್ಪಟ್ಟಿತು ಎಂಬುದನ್ನು ವಿವರಿಸಿರಿ.
8. ಒಬ್ಬನು ಸಭೆಯ ಹೊರಗಿದ್ದರೆ, ಅವನು ದೇವರ ನಿತ್ಯ ಉದ್ದೇಶದ ಹೊರಗೂ ಇರುವನೇ?
9. ಸಭೆಯು ದೇವರ ನಿತ್ಯ ಉದ್ದೇಶವಾಗಿದೆ ಎಂಬ ವಿಚಾರದಿಂದ ಯಾವ ಎರಡು ಸತ್ಯಗಳು ಮುಂದಾಗಿ ಊಹಿಸಲ್ಪಟ್ಟಿವೆ?
10. ಒಬ್ಬನು ಸಭೆಯ ಹೊರಗೆ ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಬಹುದೋ? ಅವನು ಹಾಗೆ ಮಾಡಿದರೇ, ಅವನು ದೇವರ ನಿತ್ಯವಾದ ಉದ್ದೇಶದ ಭಾಗವಾಗಿರುವನೋ?
11. ಸಭೆಯ ಮುಖಾಂತರ ನಾವು ದೇವರಿಗೆ ಹೇಗೆ ಮಹಿಮೆಯನ್ನು ತರುವೆವು? ನೋಡಿರಿ ಎಫೆಸ 3:20.
12. ಕರ್ತನ ನಿತ್ಯವಾದ ಯೋಜನೆಯು ಪೂರ್ಣವಾಗಿ ಬರುವದನ್ನು ದೇವದೂತರು ಹೇಗೆ ಅರ್ಥಮಾಡಿಕೊಳ್ಳುವರು? ನೋಡಿರಿ ಎಫೆಸ 3:10, 11.
13. ಒಬ್ಬನು ಹೇಗೆ ಕ್ರಿಸ್ತನ ದೇಹವನ್ನು, ಸಭೆಯನ್ನು ಪ್ರವೇಶಿಸಬಹುದು?

© 2009 Truth for Today